ಮಾನಸಿಕ ಸದೃಢತೆ, ಆತ್ಮಸ್ಥೈರ್ಯ, ಛಲ, ಚೈತನ್ಯಶೀಲತೆ, ಸೃಜನಾತ್ಮಕತೆ ಬದುಕಿಗೆ ಬೇಕಾದ ಇಂತಹ ಗುಣಗಳನ್ನು ರೂಢಿಸಿಕೊಂಡರೆ ಜೀವನದ ದೊಡ್ಡ ದೊಡ್ಡ ಸವಾಲುಗಳನ್ನು ಎದುರಿಸುವುದು ಕಷ್ಟವೇನಲ್ಲ ಎನ್ನುವುದು ಸಾಧಕರ ಅನಿಸಿಕೆ. ಕಠಿಣ ಪರಿಸ್ಥಿತಿಗಳನ್ನೇ ಮೆಟ್ಟಿಲುಗಳಾಗಿಸಿ ಯಶೋಶಿಖರವೇರಿ ಜಯದ ಬಾವುಟ ಹಾರಿಸಿದ ವ್ಯಕ್ತಿಗಳನ್ನು ನಮ್ಮ ಆಸುಪಾಸಿನಲ್ಲಿ ಕಾಣಬಹುದು. ದೊಡ್ಡ ದೊಡ್ಡ ಸಾಧನೆಗಳನ್ನೇ ಮಾಡಬೇಕಿಲ್ಲ. ತಮಗೆ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು, ಪ್ರತಿಕೂಲ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸುತ್ತಾರಲ್ಲ! ಆ ಸ್ಥೈರ್ಯವೇ ನಿಜವಾದ ಜೀವನ ಕಲೆ.

ಇಂತಹ ಸ್ಫೂರ್ತಿಯ ಸೆಲೆಗೊಂದು ಉದಾಹರಣೆ ಉಡುಪಿ ಜಿಲ್ಲೆಯ, ಕುಂದಾಪುರ ತಾಲೂಕಿನ ಕುಂಭಾಶಿಯ ಲಲಿತಾ ಕೊರವಡಿ. ಶಾರೀರಿಕವಾಗಿ ಬಲಹೀನರಾಗಿರುವ ಈಕೆ ತನಗೆ ತಾನೇ ಗುರುವಾಗಿ ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಆರನೇ ವಯಸ್ಸಿಗೇ ಪೋಲಿಯೊ ಮಾರಿಗೆ ತುತ್ತಾಗಿ, ಕಾಲುಗಳ ಸ್ವಾಧೀನತೆಯನ್ನು, ಕೈಗಳ ಶಕ್ತಿಯನ್ನು ಕಳೆದುಕೊಂಡ ಲಲಿತಾ ತನ್ನ ಬಲಹೀನತೆಗೆ ಕುಗ್ಗಿ ಮೂಲೆ ಹಿಡಿಯಲಿಲ್ಲ..! ತನ್ನಿಂದೇನೂ ಆಗದು ಎನ್ನುತ್ತಾ, ವಿಧಿಯನ್ನು ಹಳಿಯುತ್ತಾ ಸಮಯ ಕಳೆಯಲಿಲ್ಲ. ವಿಧಿಯನ್ನೇ ಬದಲಾಯಿಸುವ ನಿಟ್ಟಿನಲ್ಲಿ ತಾನೇ ದಾರಿ ಮಾಡಿಕೊಂಡು, ಹೆಜ್ಜೆಯಿಡುವ ಧೈರ್ಯ ತಂದುಕೊಂಡರು!

ಕೊರವಡಿಯ ಮಹಾಬಲ ಪೂಜಾರಿ ಗುಲಾಬಿ ದಂಪತಿಗಳ ಎರಡನೆಯ ಮಗಳು ಲಲಿತಾ, ಬಾಲ್ಯದಿಂದಲೂ ಬಲು ಚುರುಕಿನ ಹುಡುಗಿ. ಅಂಗವೈಕಲ್ಯದಿಂದಾಗಿ ಶಾಲೆಗೆ ಹೋಗಿ ಕಲಿಯಲಾಗಿಲ್ಲ... ಆದರೂ ಮನೆಯಲ್ಲೇ ಕನ್ನಡ, ಇಂಗ್ಲಿಷ್ ಬರೆಯುವುದನ್ನು, ಓದುವುದನ್ನು ಕಲಿತಳೆಂದು ತಾಯಿ ಗುಲಾಬಿ ಹೆಮ್ಮೆಯಿಂದ ಹೇಳುತ್ತಾರೆ.

ಕೈಗಳು ಬಲಹೀನವಾಗಿದ್ದರೂ ತಾನೇ ಊಟ ಮಾಡುತ್ತಾರೆ, ಸೊಗಸಾಗಿ ಸೀರೆ ಉಡುತ್ತಾರೆ. ತನ್ನ ಬಟ್ಟೆ ತಾನೇ ಒಗೆದುಕೊಳ್ಳುತ್ತಾರೆ! ಆಕೆಯ ಬಳಿ ಗಾಲಿಕುರ್ಚಿ ಇದ್ದರೂ ಬಳಸುವುದು ಕಡಿಮೆ, ಗಾಲಿ ಕುರ್ಚಿಯ ಮೇಲೆ ಕುಳಿತುಕೊಳ್ಳಬೇಕಾದರೆ ಇನ್ನೊಬ್ಬರ ಸಹಾಯ ಬೇಕು. ತಾನೇ ಹೋಗಬಹುದಾದ ಜಾಗಗಳಿಗೆ ಮನೆಯ ಸದಸ್ಯರಿಗೆ ವೃಥಾ ತೊಂದರೆ ಕೊಡುವುದು ಇಷ್ಟ ಆಗಲ್ಲ ಎನ್ನುತ್ತಾರೆ. ನಿಧಾನವಾಗಿಯಾದರೂ ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳುವುದೇ ತನಗೆ ತೃಪ್ತಿ ನೀಡುವುದೆಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ. ಮನೆಯ ಮುಂದಿನ ತೋಟದಲ್ಲಿ ಆಕೆಯೇ ತರಕಾರಿಗಳನ್ನು ಬೆಳೆಸಿದ್ದಾರೆ. ಆಶ್ಚರ್ಯವಾಗುತ್ತದೆ ಅಲ್ಲವೇ? ತೋಟದ ತನಕ ಯಾರ ಸಹಾಯವೂ ಇಲ್ಲದೆ ತಾನೇ ಹೋಗುತ್ತಾರೆ. ಮನೆಯ ಮೆಟ್ಟಿಲುಗಳನ್ನು ಇಳಿದು ತೆವಳುತ್ತಾ ಸಾಗುತ್ತಾರೆ. ಬಟ್ಟೆ ಮಣ್ಣಾಗಬಾರದೆಂದು ಎರಡು ಪ್ಲಾಸ್ಟಿಕ್ ಶೀಟುಗಳನ್ನು ಒಂದಾದ ಮೇಲೊಂದು ಬದಲಾಯಿಸಿಕೊಳ್ಳುತ್ತಾ, ಅದರ ಮೇಲೆ ಕುಳಿತು ತೋಟಕ್ಕೆ ಹೋಗುತ್ತಾರೆ. ಹಾಗೆ ಕಷ್ಟಪಟ್ಟು ಹೋಗುವಾಗ ಇನಿತೂ ಬೇಸರ ಅವರ ಮುಖದಲ್ಲಿ ಕಾಣಸಿಗದು!

## ತರಕಾರಿ ಬೆಳೆಯುವುದೂ ಕಾಯಕ!

ತಾನೇ ಬೆಳೆಸಿದ ಟೊಮ್ಯಾಟೊ, ಬದನೆ, ಬೆಂಡೆ, ಬಸಲೆ ಗಿಡಗಳಿಗೆ ಪೈಪಿನಿಂದ ನೀರುಣಿಸುತ್ತಾರೆ. ಬೀಜ ಬಿತ್ತಿ, ಗಿಡ ಮಾಡಿ, ಗೊಬ್ಬರ ಹಾಕಿ ಬೆಳೆಸುತ್ತಾರೆ. ಒಮ್ಮೆ ಮನೆಯವರೊಡನೆ ಯಾವುದೋ ಮಾತಿಗೆ, 'ನಾನು ತರಕಾರಿಗಳನ್ನು ಬೆಳೆಯಬಲ್ಲೆ' ಎಂದರಂತೆ, 'ತರಕಾರಿ ಬೆಳೆಯುವುದೆಂದರೆ ನೀನು ಕರಕುಶಲ ವಸ್ತುಗಳನ್ನು ಮಾಡಿದಂತಲ್ಲ, ಬಹಳಷ್ಟು ಶಾರೀರಿಕ ಶ್ರಮ ಬೇಕು' ಎಂದು ಆಕೆಯ ತಂದೆ ನುಡಿದಿದ್ದರು.

ಲಲಿತಾಳ ಛಲದ ಅರಿವಿದ್ದ ಆಕೆಯ ಅಮ್ಮ, ದೊಡ್ಡಮ್ಮನೂ ಸಹ 'ಇದು ನಿನ್ನಿಂದ ಸಾಧ್ಯವಾಗದು' ಎಂದಿದ್ದರಂತೆ..ಲಲಿತಾ ಹೆತ್ತವರ ಮಾತು ಲೆಕ್ಕಿಸದೆ ಬೆಳೆದೇ ತೋರುವೆನೆಂದುಕೊಂಡರು. ಅಂದುಕೊಂಡದ್ದು ಸಾಧಿಸಲೇ ಬೇಕಲ್ಲ! ತೋಟದಲ್ಲಿ ಮೊದಲು ಕೆಲವು ಕಲ್ಲಂಗಡಿ ಬೀಜಗಳನ್ನು ಬಿತ್ತಿದ್ದರು. ಹಾರೆಯಂತಹ ಉಪಕರಣಗಳನ್ನು ಆಕೆ ಬಳಸಲಾರರು. ಅದಕ್ಕೆ ಆಕೆ ಕಂಡುಕೊಂಡ ಮಾರ್ಗ ಗಾರೆಗೆ ಬಳಸುವ ತಾಪೆಯನ್ನು ಮಣ್ಣು ಹದಮಾಡಲು ಬಳಸುವುದು. ಚಿಕ್ಕ ಪಾತ್ರೆಯಲ್ಲಿ ಗೊಬ್ಬರ ತುಂಬಿಸಿ ತೆವಳುತ್ತಲೇ ಎಳೆದು ತಂದು







ಗಿಡಗಳ ಬುಡ ಮಾಡುವುದು.. ಆ ವರ್ಷ ಅವರ ಶ್ರಮಕ್ಕೆ ಪ್ರತಿಫಲವಾಗಿ ಆರು ಕಲ್ಲಂಗಡಿ ಹಣ್ಣುಗಳು ಬೆಳೆದವು. ಅವುಗಳಲ್ಲಿ ಒಂದು ಕಲ್ಲಂಗಡಿ ಹತ್ತು ಕಿಲೋಗ್ರಾಂ ತೂಗುತ್ತಿತ್ತಂತೆ! ಇದೇ ಹುರುಪಿನಿಂದ ತರಕಾರಿಗಳನ್ನು ಬೆಳೆಯಲಾರಂಭಿಸಿದರು.

## ಕರಕುಶಲ ಕಲೆಗೂ ಸೈ

ಲಲಿತಾ ಅಡುಗೆಯನ್ನೂ ಮಾಡಬಲ್ಲರು. ಆದರೆ ಸ್ಟೌವ್ ನೆಲದ ಮೇಲಿಡಬೇಕಾಗುತ್ತದೆ. ನೆಲವನ್ನೂ ಒರೆಸಬಲ್ಲರು. ಇವೆಲ್ಲ ಕೆಲಸಗಳನ್ನು ಮಾಡುವಾಗ ತೃಪ್ತಿಯ ಮುಗುಳ್ನಗು ಆಕೆಯ ಮೊಗದಲ್ಲಿ. ಸ್ವಾಧೀನದಲ್ಲಿಲ್ಲದ, ಪೂರ್ತಿಯಾಗಿ ಬಲಹೀನಗೊಂಡ ಕೈಗಳನ್ನೇ ಬಳಸಿ ಕೆಲಸಮಾಡುವುದನ್ನು ನೋಡುವಾಗ ಅಚ್ಚರಿಯಾಗುತ್ತದೆ. ಒಂದು ಕೈಯಿಂದ ಇನ್ನೊಂದು ಕೈಯನ್ನು ಎತ್ತಿ ಹಿಡಿದು, ಪ್ಲಾಸ್ಟಿಕ್ ದಾರ, ಉಲ್ಲನ್ ದಾರಗಳನ್ನು ಬಳಸಿ, ಬುಟ್ಟಿ, ಬ್ಯಾಗ್ ಹಾಗೂ ಇತರ ಕರಕುಶಲ ವಸ್ತುಗಳನ್ನು ತಯಾರಿಸುತ್ತಾರೆ! ಒಂದು ಕೈಯಿಂದ ಹಿಡಿಯಲು ಕಷ್ಟವಾದಾಗ ಬಾಯಿಯಿಂದ ಕಚ್ಚಿ ಹಿಡಿದು ಇನ್ನೊಂದು ಕೈಯಿಂದ ಮಾಡುತ್ತಾರೆ. ಮಾಡಲು ಇತರರಿಗಿಂತ ಹೆಚ್ಚು ಸಮಯ ತೆಗೆದುಕೊಂಡರೂ, ಗುಣಮಟ್ಟದಲ್ಲಿ ವ್ಯತ್ಯಾಸವಿರದೇ ಸುಂದರವಾಗಿ ಮೂಡಿಬರುವುದು ಆಶ್ಚರ್ಯಕರ!

ಥರ್ಮಕೋಲಿನಿಂದ ವಿವಿಧ ಅಲಂಕಾರಿಕ ವಸ್ತುಗಳನ್ನು ಮಾಡಿ ಬಣ್ಣ ತುಂಬುತ್ತಾರೆ. ಇವರ ಮನೆಯು ಇವರೇ ತಯಾರಿಸಿದ ಹ್ಯಾಂಗಿಂಗ್ಸ್, ತೋರಣಗಳಿಂದ ಅಲಂಕೃತಗೊಂಡಿದೆ. ಕಿವಿಯ ಆಭರಣಗಳು, ಕೈಬಳೆ, ಹೇರ್ ಬ್ಯಾಂಡ್, ಬ್ರೇಸ್ಲೆಟ್‌ಗಳೂ ಇವರ ಕೈಚಳಕದಲ್ಲಿ ರೂಪುಗೊಂಡಿದೆ. ಅಂಗವಿಕಲತೆ ಎಂಬ ಕೊರಗು ಕಿಂಚಿತ್ತೂ ಆಕೆಯನ್ನು ಬಾಧಿಸಿಲ್ಲ! ಮಾನಸಿಕವಾಗಿ ಸಧೃಡಳು ಎಂದುಕೊಳ್ಳುತ್ತಾ, ತಾನು ಯಾರಿಗೂ ಭಾರವಲ್ಲ ಎಂಬುದನ್ನು ಸಾಬೀತುಪಡಿಸಿದ್ದಾರೆ ಲಲಿತಾ. ಇತರ ವಿಕಲಚೇತನರಿಗೂ ಅದೇ ಕಿವಿಮಾತನ್ನು ಹೇಳುತ್ತಾರಾಕೆ. 'ಯಾಕೆ ಕೊರಗುತ್ತಾ ಕುಳಿತಿರಬೇಕು? ಸಾಧ್ಯವಾದ ಕೆಲಸ ಮಾಡಿ, ನಾವೂ ಎಲ್ಲರಂತೆ ಜೀವಿಸಬಲ್ಲೆವೆಂದು ಸಾಧಿಸಿ ತೋರಿಸಿ' ಎಂದು ಹುರಿದುಂಬಿಸುತ್ತಾರೆ.

ಪರೀಕ್ಷೆಯಲ್ಲಿ ಅನುತ್ತೀರ್ಣತೆ, ಕಡಿಮೆ ಅಂಕಗಳು, ಇಚ್ಛೆ ಪಟ್ಟ ವಸ್ತುಗಳನ್ನು ಹೆತ್ತವರು ಕೊಡಿಸಲಿಲ್ಲ, ಪ್ರೀತಿಸಿದವರ ತಿರಸ್ಕಾರ ಇಂತಹ ಸಣ್ಣ ಸಣ್ಣ ಕಾರಣಗಳನ್ನು ಅಡ್ಡ ಇಟ್ಟುಕೊಂಡು ಜೀವಕ್ಕೆ ಅಪಾಯ ತಂದುಕೊಳ್ಳುವವರು ಒಮ್ಮೆ ಯೋಚಿಸಬೇಕು. ಕಠಿಣಾತಿ ಕಠಿಣ ಸಮಸ್ಯೆಗಳನ್ನು ಅನುಭವಿಸುತ್ತಿದ್ದರೂ ತಲೆ ಎತ್ತಿ ಬದುಕು ಕಟ್ಟಿಕೊಂಡವರ ಉದಾಹರಣೆಗಳನ್ನು ಸ್ಮರಿಸಿಕೊಳ್ಳಬೇಕು. ಗಾದೆಯೇ ಇದೆಯಲ್ಲ, **'Smooth seas don't make skillful sailors'.**